ದೇವಪ್ಪ ಶೆಟ್ರನ್ನು ಕಂಡೊಡನೆ ಚಿನ್ನಾಚಾರಿ, 'ದನಿಗಳೇ ವಿಷಯ ಗೊತ್ತಾಯ್ತು ನಿಮ್ಗೆ, ನಮ್ಮ ಶಾಸ್ತ್ರಿಯವ್ರು ಹೋಗಿಬಿಟ್ರಂತಲ್ವ!...'

'ಹೌದಾ... ನಮ್ಮ ಲಾಲ್‌ಬಹದೂರು ಶಾಸ್ತ್ರಿಯವರಾ!? ಏನಂತೆ, ಹೇಗಂತೆ? ನಂಗೆ ಸುದ್ದಿ ಬರ್ಲೇ ಇಲ್ಲ ಮಾರಾಯ!! ಏನಂತೆ ಏನಾಯ್ತಂತೆ?...'

ತನಗೆ ಕೈನಾಲು ಮನೆಯ ವಾಸುತಂತ್ರಿಗಳು ಪ್ರಧಾನಿ ಶಾಸ್ತ್ರಿಯವರು ತಾಷ್ಕಂಟ್‌ನಲ್ಲಿ ಸತ್ತ ಸುದ್ದಿಯನ್ನು ಎಷ್ಟು ಹೇಳಿದ್ದರೋ... ಅಷ್ಟನ್ನೇ ಚಿನ್ನಾಚಾರಿಯು ಈ ದೇವಪ್ಪ ಶೆಟ್ರಿಗೂ ಬಿತ್ತರಿಸಿಯಾದೊಡನೆ, 'ಹೂ... ಆ ಸುದ್ದಿಯೊಮ್ಮೆ ಸಾಯ್ಲಿ ಅತ್ಲಾಗೆ... ನೀವೀಗ ಇತ್ಲಾಗೆ ಯಾವ ಜಂಬರಕ್ಕೆ ಬಂದ್ರಿ ದನಿಗಳೇ...' ಎಂದು ಪಟೇಲರನ್ನು ವಿಚಾರಿಸಿದ್ದ.

ದೇವಪ್ಪ ಶೆಟ್ರು ತನ್ನ ತಲೆಯಲ್ಲಿ ಕೊರೆಯುತ್ತಿರುವ ದೈವಕಾರ್ಯದ ಸಮಸ್ಯೆಯನ್ನು ಆತನ ತಲೆಗೂ ಹಾಕಬೇಕೆಂದು ನಿರ್ಧರಿಸಿ, ಮೊನ್ನೆ ಮ್ಯೊಲೊಟ್ಟುವಿನ ಮಹಾಲಿಂಗೇಶ್ವರರ ದೇವಸ್ಥಾನದ ನಾರ್ಣಮೈಯ್ಯರು ಹೇಳಿದ್ದ ಕೊಡಿಮರದ ವಿಚಾರವನ್ನು ಆತನ ಕಿವಿಗಿಟ್ಟಿದ್ದರು.

ಶೆಟ್ಟರ ಮಾತನ್ನು ಕೇಳಿಸಿಕೊಂಡವನೆ ಚಿನ್ನಾಚಾರಿ, ಆತನ ಮೈಯಲ್ಲಿ ಒಂದಷ್ಟು ಕೆಂಪಿರುವೆಗಳು ಹರಿತಿವೆಯೇನೋ ಎಂಬಂತೆ ಮೈ ಅದುರಿಸಿಕೊಂಡು 'ಏನಂತೆ ಅವರದು ಹೊಸ ಮರ್ಲು; ಬಿಳಿಕೇಪಳದ ಮರ ಸಿಗದಿದ್ದರೆ... ದೈವಸ್ಥಾನದಲ್ಲಿ ಕೊಡಿಮರ ನಿಲ್‌ಸ್ಲಿಕ್ಕೇ ಇಲ್ವಂತೆಯಾ? ನೀವೊಮ್ಮೆ ಸುಮ್ಮಿರಿ ಪಟ್ಲೆರೆ; ಆ ಮಯ್ಯರಿಗೆ ಮೊನ್ನೆ ಹುಣ್ಣಿಮೆಗೆ ಹೇಳಿದ್ದು... ನಾಡಿದ್ದಿನ ಅಮಾಸೆಗೆ ನೆನಪಿರಲ್ಲ. ಮೊದಲಿನಿಂದಲೂ ಅವರು ಹಾಗೆ ಅಲ್ವಾ... ನಮ್ಮನ್ನು ಕೊನೆ ಗಳಿಗೆಯಲ್ಲಿ ದಿಕ್ಕು ತಪ್ಪಿಸೋದ್ರಲ್ಲಿ ಅವರದ್ದು ಎತ್ತಿದ ಕೈಯಿ; ನಿಮ್ಗೆ ಹಾಗೂ ಬೇಕಿದ್ರೆ ನೀವೊಮ್ಮೆ ನಮ್ಮ ತಂತ್ರಿಗಳನ್ನೇ ಕೇಳಿಬಿಡಿ' ಎಂದು ಹೇಳುವ ಮೂಲಕ ಆತ ಶೆಟ್ಟರೊಳಗಿನ ಆತಂಕವನ್ನು ಅರೆವಾಸಿ ತಿಳಿಗೊಳಿಸಿದ್ದ.

ಆತನ ತಾತ–ಮುತ್ತಾತರ ಕಾಲದಿಂದಲೂ ಆಚರಿಸಿಕೊಂಡು ಬರುತ್ತಿದ್ದ ಶಾಸ್ತ್ರ, ಕಟ್ಟು, ಸಂಪ್ರದಾಯದಂತೆ, ದೈವಗಳ ನಗ, ಮುಗ, ಕಿರೀಟ, ಗಂಟೆ, ಕಟ್ಟಲೆ, ಪೀಠ ಮಾಡುವುದರಲ್ಲಿ ಈ ಚಿನ್ನಾಚಾರಿಯದ್ದು ಎತ್ತಿದ ಕೈ. ಆತನ ಅಣ್ಣ ಶ್ರೀಧರಾಚಾರಿಯಂತೂ, ದೈವ–ದೇವಸ್ಥಾನಗಳೆದುರು ಕೊಡಿಮರ ನಿಲ್ಲಿಸುವುದರಲ್ಲಿ, ಆ ಕೊಡಿಮರಕ್ಕೆ ಬೆಳ್ಳಿ,ಕಂಚುತಾಮ್ರದ ಕವಚ ಮುಚ್ಚುವುದರಲ್ಲಿ ನಾಲ್ಕೂರಿಗೇ ನಿಸ್ಸೀಮ. ವಂಶಪಾರಂಪರ್ಯವಾಗಿ ತುಳುನಾಡಿನ ದೇವಸ್ಥಾನ–ದೈವಸ್ಥಾನಗಳಿಗೆ ಮಾಡು ಮುಚ್ಚಿಗೆ ಮಾಡಿಕೊಂಡು ಬಂದಿರುವ, ದೇವಾಚಾರಿ ಕುಟುಂಬದ ಈ ತಲೆಮಾರಿನ ಗುರಿಕಾರ ಅಂದರೆ ಇದೀಗ ಈ ಧೂಮಾವತಿ ದೈವಸ್ಥಾನದ ಕೊಡಿಮರದ ಕೆಲಸವನ್ನು ವಹಿಸಿಕೊಂಡಿರುವ ಆ ಶ್ರೀಧರಾಚಾರಿ. ದೈವ–ದೇವರುಗಳಿಗೆ ಮಾಡಬೇಕಾಗಿರುವ ಇಂತಹ ಕಾರ್ಯಗಳಲ್ಲಿ ತಜ್ಞನೇ ಆಗಿರುವ ಆ ಶ್ರೀಧರಾಚಾರಿಯಲ್ಲೆ ಒಂದು ಮಾತು ಕೇಳಿ, ನಂತರ ನಮ್ಮ ವಾಸುತಂತ್ರಗಳಲ್ಲಿ ಕೇಳಿದರೆ ಹೇಗೆ ? – ಎಂದು ಒಂದು ಕ್ಷಣ ಯೋಚಿಸಿದ ಶೆಟ್ಟರೀಗ ಚಿನ್ನಾಚಾರಿಯಲ್ಲಿ ತನ್ನ ಮನದ ಆ ಇಂಗಿತವನ್ನು ಹೇಳಿಕೊಂಡರು.

'ಅರೆ... ನಮ್ಮ ಸಿರ್ದರಣ್ಣನನ್ನೂ ಕೇಳ್ತೀರಾ? ಭಾರೀ ಒಳ್ಳೆ ಕೆಲ್ಸ ಪಟ್ಲೆರೆ; ಮೊದ್ಲು ನೀವು ಆ ಕೆಲಸ ಮಾಡಿ. ಆತನಂತೂ ದೈವದೇವರ ಕೆಲಸಗಳಲ್ಲೇ ಎದ್ದು ಬಿದ್ದು ಮಿಂದು, ಬಂದವನು. ಸದಾ ದೈವ ಒಪ್ಪುವ ಮಾತನ್ನೇ ಹೇಳುವವನು ಅವ್ನು, ದೇವರಿಗೆ ಸಮನಾಗಿ ನಡೆವವನು ಅವನು', ಎಂದು ಹೇಳುತ್ತ 'ಧನಿಗಳೇ... ನಾನು ಆ ದೈವದ ಕೆಲಸಕ್ಕಾಗಿಯೆ ಕುಡ್ಲದ ರಥಬೀದಿಗೆ ಹೊರಟಿದ್ದೇನೆ... ಬೆಳ್ಳಿಯ ಹಾಳೆ ತರುದಕ್ಕೆ. ಹೊತ್ತಾದ್ರೆ ನಂಗೆ ಮಿಸ್ಕಿತರ ಬಸ್ಸು ತಪ್ಪುತ್ತೆ; ನಿಮ್ಗೆ